ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 1069/2021

ಸಿ ಡಬ್ಲ್ಯೂ-8
ಪಿ ಡಬ್ಲ್ಯೂ-6

ದಿಃ 06-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ವಿನಯ ಕುಂಟಿಮನೆ |
| ತಂದೆಯ ಹೆಸರುಃ | ನಾಗು |
| ವಯಸ್ಸುಃ | 33 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಿಳಾಸಃ | ಸೀಬರ್ಡ ಕಾಲೋನಿ, ಬೆಲೆಕೇರಿ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ದಿಃ30-07-2021 ರಂದು ನಾನು ಅಂಗಡಿ ಸಾಮಾನುಗಳನ್ನು ತರಲು ಹೋದಾಗ ಡಂಪರ್ ಮತ್ತು ಬೈಕ್ ಮಧ್ಯ ಅಪಘಾತವಾಗಿರುತ್ತದೆ. ಡಂಪರ್ ವಾಹನವು ಕಾರವಾರ ಕಡೆಗಯಿಂದ ಬರುತ್ತಿತ್ತು. ಹಾರವಾಡ ಕ್ರಾಸ್ ಹತ್ತಿರ ಸಂಜೆ ಸುಮಾರು 6.30 ಗಂಟೆಗೆ ಅಪಘಾತವಾಗಿರುತ್ತದೆ. ಡಂಪರ ವಾಹನವು ಬೈಕಿನ ಮುಂಬದಿಗೆ ಗುದ್ದಿರುತ್ತದೆ. ಬೈಕ್ ಸವಾರನಿಗೆ ಕಾಲಿಗೆ ಪಟ್ಟಾಗಿದ್ದು, ಕಿವಿಯಿಂದ ರಕ್ತ ಬರುತ್ತಿದ್ದು, ಬೈಕಿನಲ್ಲಿ ಇಬ್ಬರು ಇದ್ದರು. ಹಿಂಬದಿ ಸವಾರನಿಗೆ ಮಂಡಿ ಭಾಗಕ್ಕೆ ಪಟ್ಟಾಗಿರುತ್ತದೆ. ನಂತರ ಐ ಆರ್ ಬಿ ಅಂಬುಲೆನ್ಸ ಮುಖಾಂತರ ಇಬ್ಬರೂ ಬೈಕ್ ಸವಾರರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಬೈಕ್ ನಂ. ಕೆ ಎ 31- ಡಬ್ಲ್ಯೂ 9212 ಮತ್ತು ಡಂಪರ ವಾಹನ

ನಂ. ಎ ಆರ್ -02-2941 ಆಗಿರುತ್ತದೆ. ಟಿಪ್ಪರ್ ಚಾಲಕನು ಅಚಾನಕ್ ಆಗಿ ಟರ್ನ ಮಾಡಿದ್ದರಿಂದ ಅಪಘಾತವಾಗಿರುತ್ತದೆ. ಅಪಘಾತಪಡಿಸಿದ ವಾಹನ ಚಾಲಕನನ್ನು ನಾನು ನೋಡಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ಗುರುತಿಸುತ್ತಾರೆ. ಸದರಿ ಅಪಘಾತದಲ್ಲಿ ರವಿ ಲೋಕು ಗೌಡ ಎಂಬುವವರು ಮರಣಪಟ್ಟಿರುತ್ತಾರೆ. ವಾಹನದಿಂದ ಹಾರಿ ಮುಂದೆ ಬಿದ್ದಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ಟಿಪ್ಪರ್ ಲಾರಿ ಚಾಲಕ ಯಾವುದೇ ಕೈಸನ್ನೆ ಮಾಡದೇ ಅತಿ ವೇಗ ಹಾಗೂ ನಿರ್ಲಕ್ಷತನದ ಚಾಲನೆಯ ಕಾರಣದಿಂದ ಹಾರವಾಡ ಕ್ರಾಸ್ ಗೆ ತಿರುಗಿಸಿದಾಗ ಸದರಿ ಅಪಘಾತವಾಗಿರುತ್ತದೆ ನೀವು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತಿಡೇರಿ ಎಂದರೆ ಸರಿ. ಅದೇ ರೀತಿ ಬೈಕ್ ಮುಂಬದಿ ಸವಾರನು ಸದರಿ ಅಪಘಾತದಿಂದ ಸ್ಥಳದಲ್ಲೇ ಮೃತ ಪಟ್ಟಿರುತ್ತಾನೆ ಎಂದು ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಸರಿ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ಕುಂಟಿಮನೆ ಎಂದರೆ ಗೌಡರ ಸಮಾಜಕ್ಕೆ ಸೇರಿದವರು ಎಂದರೆ ಸರಿ. ಚಾಸಾ–6,7 ಮತ್ತು ನೀವು ಒಂದೇ ಜಾತಿಯವರು ಎಂದರೆ ಸರಿ. ಚಾಸಾ–6 ರವರು ನಿಮ್ಮ ಸಂಬಂಧಿಕರಾ ಅಥವಾ ದೋಸ್ತರಾ ಎಂದರೆ ನನಗೆ ಪರಿಚಯವಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಗೆ ಬರುತ್ತಿದ್ದೀರಿ ಎಂದರೆ ಸಾಕ್ಷಿಯು ಸೈಕಲ್ ನಲ್ಲಿ ಬರುತ್ತಿದ್ದೆ ಎಂದು ನುಡಿಯುತ್ತಾರೆ. ಎಲ್ಲಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಅವರ್ಸಾಕ್ಕೆ ಹೋಗಿದ್ದು, ಅಲ್ಲಿಂದ ವಾಪಸ್ಸು ಬರುವಾಗ ಅಪಘಾತ ನೋಡಿರುತ್ತೇನೆ. ನಿಮ್ಮ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಸೀಬರ್ಡ ಕಾಲೋನಿ ಬೇಲೆಕೇರಿ ಎಂದು ನುಡಿಯುತ್ತಾರೆ. ಸೀಬರ್ಡ ಕಾಲೋನಿ ಬೆಲೇಕೇರಿಯಿಂದ ಅವರ್ಸಾಗೆ ಬರಬೇಕಾದರೆ ಹಾರವಾಡ ಕ್ರಾಸ್ ಸಿಗುವುದಿಲ್ಲ ಎಂದರೆ ಸರಿ. ನೀವು ಹಾರವಾಡ ಕ್ರಾಸ್ ಗೆ ಹೋಗಲು ಯಾವ ವಿಶೇಷ ಕಾರಣ ಇತ್ತು ಎಂದರೆ ಸಾಕ್ಷಿಯು ಜನರು ನಿಂತುಕೊಂಡಿರುವುದನ್ನು ನೋಡಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೋದೇನು ಎಂದಾಗ ಅಪಘಾತವಾಗಿ ಎಷ್ಟು ಹೊತ್ತು ಆಗಿತ್ತು ಎಂದರೆ ಸಾಕ್ಷಿಯು 2 ನಿಮಿಷ ಆಗಿತ್ತು ಎಂದು ನುಡಿಯುತ್ತಾರೆ. ನೀವು ಸ್ಕೂಟರ್ ಚಾಲನೆ ಮಾಡುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸ್ಕೂಟರ್ ಚಾಲನೆ ಮಾಡುವವರು ರಸ್ತೆಯ ಯಾವ ಅಂಚಿನಲ್ಲಿ ಓಡಿಸಬೇಕು ಎಂದರೆ ಸಾಕ್ಷಿಯು ಎಡಬದಿಗೆ ಓಡಿಸಬೇಕು ಎಂದು ನುಡಿಯುತ್ತಾರೆ. ನೀವು ಅಪಘಾತ ನೋಡಿದೇನು ಎಂದಾಗ ನಿಡಿ–2ರ ಪ್ರಕಾರ ಡಂಪರ್ ಡಿವೈಡರ್ ನಿಂದ ಎಷ್ಟು ಅಂತರದಲ್ಲಿ ಇತ್ತು ಎಂದರೆ ಸಾಕ್ಷಿಯು ನಾನು ನೋಡಿದಾಗ ಡಂಪರ್ ವಾಹನವು ತಿರುಗಿ ಮುದಗಾ

ಕಡೆಗೆ ನಿಂತುಕೊಂಡಿತ್ತು ಎಂದು ನುಡಿಯುತ್ತಾರೆ. ಡಿವೈಡರಿನ ಬಲಭಾಗಕ್ಕೆ ಇತ್ತಾ ಅಥವಾ ಎಡಭಾಗದಲ್ಲಿ ಇತ್ತಾ ಎಂದರೆ ಸಾಕ್ಷಿಯು ಎಡಭಾಗದಲ್ಲಿ ಇತ್ತು ಎಂದು ನುಡಿಯುತ್ತಾರೆ. ನೀವು ನೋಡಿದಾಗ ಬೈಕ್ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಯು ಟರ್ನ ತೆಗೆದುಕೊಳ್ಳುವ ರಸ್ತೆಯ ಮಧ್ಯದಲ್ಲಿ ಬಿದ್ದಿತ್ತು ಎಂದು ನುಡಿಯುತ್ತಾರೆ.

ಬೆಳಗಿನ ಅವಧಿ ಮುಕ್ತಾಯವಾಗಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

ಸಾಕ್ಷಿಯನ್ನು ಮಧ್ಯಾಹ್ನದ ಅವಧಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

4. ನಿಡಿ–2 ರಲ್ಲಿ ನೀವು ಯಾವ ಬದಿಗೆ ಇದ್ದೀರಿ ಎಂದರೆ ಸಾಕ್ಷಿಯು ಅವರ್ಸಾ ಕಡೆಗೆ ಇದ್ದೆ ಎಂದು ನುಡಿಯುತ್ತಾರೆ. ನಿಡಿ–2 ರಲ್ಲಿ ಬಲಗಡೆ ಬಂದರೆ ಕಾರವಾರ ಎಂದರೆ ಸರಿ. ನಿಡಿ–3 ರಲ್ಲಿ stop ಎಂದು ಬರೆದಿರುವ ಸ್ಥಳವು ಹೆಚ್ಚುವರಿಯಾಗಿರುವ ಸ್ಥಳ ಎಂದರೆ ಸರಿ. ನಿಡಿ–4 ರಲ್ಲಿ ಕಂಡುಬರುವ ಬಾಣದ ಗುರುತು ಹಾರವಾಡ ಕ್ರಾಸ್ ಗೆ ಯು ಟರ್ನ ತೆಗೆದುಕೊಳ್ಳಲು ತೋರಿಸುತ್ತದೆ ಎಂದರೆ ಸರಿ. ಸೀದಾ ಇರುವ ಗುರುತು ಅಂಕೋಲಾ ಕಡೆಗೆ ಹೋಗಲು ತೋರಿಸುತ್ತದೆ ಎಂದರೆ ಸರಿ. ನಿಡಿ–4 ರಲ್ಲಿ ಎಡಬದಿಯಲ್ಲಿ

ಕಂಡುಬರುವ ಗುರುತಿನ ರಸ್ತೆಯು ರಾಷ್ಟ್ರೀಯ ಹೆದ್ದಾರಿಯ ರಸ್ತೆಯಷ್ಟೇ ಅಗಲವಾಗಿರುತ್ತದೆ ಎಂದರೆ ಸರಿ. ಡಿವೈಡರಿನಿಂದ ಬಿಳಿ ಪಟ್ಟಿ ತೋರಿಸುವ ಸ್ಥಳವು ಹೆಚ್ಚುವರಿ ಸ್ಥಳವಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವೇಗದ ಮಿತಿ ಇರುವ ಫಲಕ ಏನಾದರೂ ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾಹನ ಸಂಖ್ಯೆ ಎಲ್ಲಿ ಬರೆದಿತ್ತು ಎಂದರೆ ಸಾಕ್ಷಿಯು ನಂಬರ್ ಪ್ಲೇಟಿನಲ್ಲಿ ಬರೆದಿತ್ತು ಎಂದು ನುಡಿಯುತ್ತಾರೆ. ವಾಹನಕ್ಕೆ ಎಷ್ಟು ನಂಬರ್ ಪ್ಲೇಟ್ ಗಳು ಇದ್ದವು ಎಂದರೆ ಸಾಕ್ಷಿಯು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂಬರ್ ಪ್ಲೇಟ್ ಸ್ಟೀಲಿನ ಪ್ಲೇಟ್ ಅಥವಾ ಕಬ್ಬಿಣ ಪ್ಲೇಟ್ ಆಗಿತ್ತಾ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂಬರ್ ಪ್ಲೇಟ್ ಕೆಳಗಡೆ ತೂಗಾಡುತ್ತಿತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ಎಷ್ಟು ಕಡೆ ನಂಬರ್ ಪ್ಲೇಟ್ ಇತ್ತು ಎಂದರೆ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಬೈಕಿನದ್ದು ಹಿಂಬದಿಯ ನಂಬರ್ ನೋಡಿರುತ್ತೀರಾ ಅಥವಾ ಮುಂಬದಿಯ ನಂಬರ ನೋಡಿರುತ್ತೀರಾ ಎಂದರೆ ಸಾಕ್ಷಿಯು ಹಿಂಬದಿಯ ಸಂಖ್ಯೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ವಾಹನಗಳ ನಂಬರುಗಳನ್ನು ಬರೆದು ಇಟ್ಟುಕೊಂಡಿರುತ್ತೀರಾ ಅಥವಾ ಆ ದಿನ ನೋಡಿದ್ದನ್ನು ನೆನಪಿನಲ್ಲಿ ಇಟ್ಟುಕೊಂಡು ಹೇಳಿರುತ್ತೀರಾ ಎಂದರೆ ಸಾಕ್ಷಿಯು ದೂರನ್ನು ಕೊಡುವಾಗ ಬರೆದಿಟ್ಟುಕೊಂಡಿದ್ದೆ ಎಂದು ನುಡಿಯುತ್ತಾರೆ. ಬೈಕ್ ನಂಬರ ಈಗ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಕೆ ಎ 31–ಡಬ್ಲ್ಯೂ 9212 ಎಂದು ನುಡಿಯುತ್ತಾರೆ. ಪೊಲೀಸರಿಗೆ ಯಾವ ದಿನಾಂಕದಂದು ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದು ಹೇಳಲು ಆಗುತ್ತಾ ಎಂದರೆ ದಿಃ30–07–2021

ರಂದು ರಾತ್ರಿ 8.00 ಗಂಟೆಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆದಾದ ನಂತರ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಠಾಣೆಗೆ ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಹೇಳಿಕೆಯನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಅಂಕೋಲಾದ ಪೊಲೀಸ್ ಠಾಣೆಯಲ್ಲಿ ಕೊಟ್ಟಿರುತ್ತೇನೆ. ಯಾರ ಮುಂದೆ ಎಂದು ನೆನಪಿರುವುದಿಲ್ಲ. ಆ ದಿನ ನೀವು ಆರೋಪಿಯನ್ನು ವಾಹನದಲ್ಲಿ ನೋಡಿರುವುದಿಲ್ಲ ಎಂದರೆ ಸಾಕ್ಷಿಯು ವಾಹನದಲ್ಲೇ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಆರೋಪಿಯನ್ನು ವಾಹನದಲ್ಲಿ ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿಯ ಯಾವುದೇ ತಪ್ಪು, ಅತೀವೇಗ ಅಥವಾ ನಿರ್ಲಕ್ಷತನ ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ ರವಿ ಇವರ ಕುಟುಂಬಕ್ಕೆ ಪರಿಹಾರ ಸಿಗಬೇಕು ಎನ್ನುವ ಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-6 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಟಿಪ್ಪರ್ ವಾಹನದ ಚಾಲಕ ತಪ್ಪು ಇಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತವಾಯಿತು ಎನ್ನುವ ದಿನ ಬೇರೆ ಬೇರೆ ಜಾತಿಯ ಜನರು ಕೂಡಿದ್ದರು ಎಂದರೆ ಸರಿ. ನೀವು ನಿಮ್ಮ ಹೇಳಿಕೆಯಲ್ಲಿ ನಾನು ಆ ದಿನ ಚಾಲಕನನ್ನು ವಾಹನದಲ್ಲಿ ನೋಡಿರುತ್ತೇನೆ ಎಂದು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ.

<u>ಮರುವಿಚಾರಣೆ:</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.